ಕರ್ನಾಟಕ ಸರ್ಕಾರ

ಸಂಖ್ಯೆ: ಒಇ 4 ಸಿಡಬ್ಲ್ಯುಪಿ 97

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 04-02-1997

## ಸುತ್ತೋಲೆ

ವಿಷಯ:- ಅಭಿರಕ್ಷೆಯಲ್ಲಿರುವಾಗ ಕೊಡುವ ಹಿಂಸೆ ಅಥವಾ ಲಾಕಪ್ ಸಾವು ಈ ಬಗ್ಗೆ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳುವ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು — ತತ್ಸಂಬಂಧದಲ್ಲಿ ಮಾರ್ಗದರ್ಶಿ ಸೂತ್ರಗಳು.

-00-

ಶ್ರೀ. ಡಿ.ಕೆ. ಬಸು -ವಿರುದ್ಧ- ಪಶ್ಚಿಮ ಬಂಗಾಲ ರಾಜ್ಯ ಮೊಕದ್ದಮೆಯಲ್ಲಿ ಸಲ್ಲಿಸಿದ ರಿಟ್ಅರ್ಜಿ ಸಂಖ್ಯೆ:(ಕ್ರಿಮಿನಲ್) 539:1986 ಮತ್ತು ಅಶೋಕ ಕೆ. ಜೋಹರಿ - ವಿರುದ್ಧ - ಉತ್ತರ ಪ್ರದೇಶ ರಾಜ್ಯ ಮೊಕದ್ದಮೆಯಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ (ಕ್ರಿಮಿನಲ್) 592:1987 ಇವುಗಳ ಸಂಬಂಧದಲ್ಲಿ ಕಸ್ಟಡಿಯಲ್ಲಿ ಕೊಡುವ ಹಿಂಸೆ ಮತ್ತು ಪೋಲೀಸ್ ಲಾಕಪ್ ಸಾವುಗಳ ಸಂಬಂಧದಲ್ಲಿ ಎತ್ತಿದ ವಿವಾದಾಂಶದ ಪ್ರಾಮುಖ್ಯತೆಯನ್ನು ಪರಿಗಣಿಸಿ ಸದರಿ ಅರ್ಜಿಗಳನ್ನು ವಿಲೇ ಮಾಡುತ್ತಾ ಕಾನೂನಿನ ವ್ಯಾಪ್ತಿಯೊಳಗೆ ಭಯೋತ್ಪಾದಕ ಕೃತ್ಯವನ್ನು ತಡೆಯುವುದಕ್ಕಾಗಿ ರಾಜ್ಯವು ನಿಯೋಜಿಸಿರುವ ವಿವಿಧ ಏಜೆನ್ಸಿಗಳು ತಾವೇ ಕಾನೂನನ್ನು ಕೈಗೆ ತೆಗೆದುಕೊಳ್ಳದಂತೆ ನೋಡಿಕೊಳ್ಳಬೇಕೆಂದು ಭಾರತ ಸರ್ವೋಚ್ಚ ನ್ಯಾಯಾಲಯವು ಒತ್ತಿ ಹೇಳುತ್ತಾ 18-12-1996 ರಂದು ತನ್ನ ತೀರ್ಪನ್ನು ನೀಡಿದೆ. ತನಿಖೆಗೆ ಸಂಬಂಧಿಸಿದಂತೆ ವೈಜ್ಞಾನಿಕ ವಿಧಾನಗಳನ್ನು ಅಭಿವೃದ್ಧಿ ಪಡಿಸುವ ಮತ್ತು ತನಿಖೆ ನಡೆಸುವವರಿಗೆ ಸೂಕ್ತ ತರಬೇತಿ ನೀಡುವ ಅಗತ್ಯತೆ ಸರ್ವೋಚ್ಚ ನ್ಯಾಯಾಲಯ ಹೆಚ್ಚಿನ ಒತ್ತು ಕೊಟ್ಟಿದೆ.

2) ದಸ್ತಗಿರಿ ಮಾಡುವ ಅಥವಾ ಬಂಧನದಲ್ಲಿರುವ ಎಲ್ಲಾ ಪ್ರಕರಣಗಳಲ್ಲಿ ಈ ಸಂಬಂಧದಲ್ಲಿ ಕಾನೂನು ಉಪಬಂಧಗಳನ್ನು ಮಾಡುವವರೆಗೆ ಅನುಸರಿಸಬೇಕಾದ ಈ ಕೆಳಕಂಡ ಅಗತ್ಯತೆಗಳನ್ನು ಪ್ರತಿಬಂಧಾತ್ಮಕ ಕ್ರಮಗಳಾಗಿ ಹೊರಡಿಸುವುದು ಸೂಕ್ತವೆಂದು ಸರ್ವೋಚ್ಚ ನ್ಯಾಯಾಲಯವು ಭಾವಿಸಿದೆ.

''(1) ದಸ್ತಗಿರಿ ಮಾಡುವ ಮತ್ತು ದಸ್ತಗಿರಿಯಾದವನನ್ನು ವಿಚಾರಣೆ ಮಾಡುವ ಪೋಲೀಸ್ ಸಿಬ್ಬಂದಿ ಸರಿಯಾದ, ಕಣ್ಣಿಗೆ ಕಾಣುವಂಥ ಮತ್ತು ಸ್ಪಷ್ಟವಾದ ಗುರುತಿನ ಕಾರ್ಡನ್ನು ಮತ್ತು ಹೆಸರು ಹಾಗೂ ಪದನಾಮ ಇರುವ ನಾಮಫಲಕವನ್ನು ಹೊಂದಿರತಕ್ಕದ್ದು. ದಸ್ತಗಿರಿಯಾದವನನ್ನು ವಿಚಾರಣೆ ಮಾಡುವ ಕಾರ್ಯ ನಿರ್ವಹಿಸುವಂಥ ಎಲ್ಲಾ ಪೋಲೀಸ್ ಸಿಬ್ಬಂದಿಯ ವಿವರಗಳನ್ನು ಒಂದು ರಿಜಿಸ್ಟರಿನಲ್ಲಿ ದಾಖಲು ಮಾಡತಕ್ಕದ್ದು.

(2) ದಸ್ತಗಿರಿಯಾದವನನ್ನು ದಸ್ತಗಿರಿ ಮಾಡುವ ಪೋಲೀಸ್ ಅಧಿಕಾರಿಯು ದಸ್ತಗಿರಿಯ ಸಮಯದಲ್ಲಿ ದಸ್ತಗಿರಿ ಜ್ಞಾಪನವನ್ನು ಸಿದ್ಧಪಡಿಸತಕ್ಕದ್ದು ಮತ್ತು ಆ ಜ್ಞಾಪನ ಪತ್ರವನ್ನು ಕೊನೆ ಪಕ್ಷ ಒಬ್ಬ ಸಾಕ್ಷಿದಾರನು ದೃಢೀಕರಿಸತಕ್ಕದ್ದು. ಆ ಸಾಕ್ಷಿದಾರನು ದಸ್ತಗಿರಿಯಾದವನ ಕುಟುಂಬದ ಸದಸ್ಯನಾಗಿರಬಹುದು ಅಥವಾ ದಸ್ತಗಿರಿಯಾದವನನ್ನು ಯಾವ ಪ್ರದೇಶದಿಂದ ದಸ್ತಗಿರಿ ಮಾಡಲಾಯಿತೋ ಆ ಪ್ರದೇಶದ ಗೌರವಾನ್ವಿತ ವ್ಯಕ್ತಿಯಾಗಿರಬಹುದು. ದಸ್ತಗಿರಿಯಾದವನು ಅದಕ್ಕೆ ಮೇಲು ರುಜು ಹಾಕತಕ್ಕದ್ದು ಮತ್ತು ದಸ್ತಗಿರಿ ಮಾಡಿದ ಸಮಯ ಹಾಗೂ ದಿನಾಂಕವನ್ನು ಅದರಲ್ಲಿ ನಮೂದಿಸತಕ್ಕದ್ದು.

(3) ದಸ್ತಗಿರಿ ಮಾಡಲ್ಪಟ್ಟಿರುವ ಅಥವಾ ಬಂಧನದಲ್ಲಿಡಲಾಗಿರುವ ಮತ್ತು ಒಂದು ಪೋಲೀಸ್ ಠಾಣೆಯಲ್ಲಿ ಅಥವಾ ವಿಚಾರಣಾ ಕೇಂದ್ರದಲ್ಲಿ ಅಥವಾ ಇತರ ಲಾಕಪ್‌ನಲ್ಲಿ ಅಭಿರಕ್ಷೆಯಲ್ಲಿಡಲಾಗಿರುವ ಒಬ್ಬ ವ್ಯಕ್ತಿಯು, ಆತನ ದಸ್ತಗಿರಿ ಜ್ಞಾಪನಾ ಪತ್ರವನ್ನು ದೃಢೀಕರಿಸಿರುವ 'ಸಾಕ್ಷಿದಾರ -

..... 2)

ವ್ಯಕ್ತಿಯೇ ಸ್ವತಃ ಅಂಥ ದಸ್ತಗಿರಿಯಾದವನ ಸ್ನೇಹಿತ ಅಥವಾ ಸಂಬಂಧಿಯಾಗಿದ್ದು ಹೊರತು ಆತನ ಒಬ್ಬ ಸ್ನೇಹಿತ ಅಥವಾ ಸಂಬಂಧಿ ಅಥವಾ ಗೊತ್ತಿರುವ ಇತರ ವ್ಯಕ್ತಿ ಅಥವಾ ಆತನ ಕಲ್ಯಾಣದ ಬಗ್ಗೆ ಆಸಕ್ತಿಯುಳ್ಳ ವ್ಯಕ್ತಿಗೆ ಸಾಧ್ಯವಾದಷ್ಟು ಬೇಗನೆ ಆತನನ್ನು ದಸ್ತಗಿರಿ ಮಾಡಲಾಗಿದೆ ಮತ್ತು ಇಂಥ. ನಿರ್ದಿಷ್ಟ ಸ್ಥಳದಲ್ಲಿ ಬಂಧನದಲ್ಲಿಡಲಾಗಿದೆ ಎಂಬುದಾಗಿ ತಿಳಿಸಲ್ಪಡುವ ಹಕ್ಕುಳ್ಳವನಾಗಿರತಕ್ಕದ್ದು.

4) ದಸ್ತಗಿರಿಯಾದವನ ಸ್ನೇಹಿತನು ಅಥವಾ ಸಂಬಂಧಿಯು ಜಿಲ್ಲೆಯ ಅಥವಾ ಪಟ್ಟಣದ ಹೊರಗಡೆ ವಾಸಿಸುತ್ತಿರುವ ಸಂದರ್ಭದಲ್ಲಿ ಪೋಲೀಸರು ದಸ್ತಗಿರಿ ಮಾಡಿದ 8 ರಿಂದ 12 12 ಗಂಟೆಯ ಅವಧಿಯೊಳಗೆ ದಸ್ತಗಿರಿ ಮಾಡಿದ ಸಮಯ, ದಸ್ತಗಿರಿ ಮಾಡಿದ ಸ್ಥಳ ಮತ್ತು ದಸ್ತಗಿರಿಯಾದವನನ್ನು ಪೋಲೀಸರ ವಶದಲ್ಲಿರುವ ಸ್ಥಳವನ್ನು ಜಿಲ್ಲೆಯಲ್ಲಿನ ಕಾನೂನು ನೆರವು ಸಂಸ್ಥೆಗಳ ಮೂಲಕ ಹಾಗೂ ಸಂಬಂಧಪಟ್ಟ ಪ್ರದೇಶದ ಪೋಲೀಸ್ ಠಾಣೆಯ ಮುಖಾಂತರ ತಂತಿ ಮುಖೇನ ಅಂಥ ಸ್ನೇಹಿತ ಅಥವಾ ಸಂಬಂಧಿಗೆ ತಿಳಿಸತಕ್ಕದ್ದು.

5) ದಸ್ತಗಿರಿಯಾಗಿರುವ ವ್ಯಕ್ತಿಗೆ, ಆತನನ್ನು ದಸ್ತಗಿರಿ ಮಾಡಿದ ಕೂಡಲೇ ಅಥವಾ ಬಂಧನದಲ್ಲಿಟ್ಟ ಕೂಡಲೇ ಆತನನ್ನು ದಸ್ತಗಿರಿ ಮಾಡಿರುವ ಅಥವಾ ಆತನನ್ನು ಬಂಧನದಲ್ಲಿಟ್ಟಿರುವ ಮಾಹಿತಿಯನ್ನು ಯಾರಾದರೂ ಒಬ್ಬರಿಗೆ ತಿಳಿಯಪಡಿಸುವುದಕ್ಕೆ ತನಗಿರುವ ಹಕ್ಕಿನ ಬಗ್ಗೆ ತಿಳಿಸಬೇಕು.

6) ಬಂಧನದಲ್ಲಿರುವ ಸ್ಥಳದಲ್ಲಿ ವ್ಯಕ್ತಿಯ ದಸ್ತಗಿರಿಯ ಬಗ್ಗೆ ದಿನಚರಿ ಪುಸ್ತಕದಲ್ಲಿ ನಮೂದು ಮಾಡಬೇಕು, ಇದರಲ್ಲಿ ಆತನ ದಸ್ತಗಿರಿಯ ವಿಷಯವನ್ನು ತಿಳಿಸಲಾಗಿರುವಂಥ ಆತನ ನಿಕಟ ಸ್ನೇಹಿತನ ಹೆಸರನ್ನು ಮತ್ತು ದಸ್ತಗಿರಿಯಾದ ವ್ಯಕ್ತಿಯ ಅಭಿರಕ್ಷೆಹೊಂದಿರುವ ಪೋಲೀಸ್ ಅಧಿಕಾರಿಗಳ ಹೆಸರುಗಳು ಮತ್ತು ವಿವರಗಳನ್ನು ತಿಳಿಸಬೇಕು.

7) ದಸ್ತಗಿರಿಯಾದವನು, ಆತನನ್ನು ದಸ್ತಗಿರಿ ಮಾಡಿದ ಸಮಯದಲ್ಲಿ ತನ್ನನ್ನು ಪರೀಕ್ಷಿಸಬೇಕೆಂದು ಕೋರಿದ ಪಕ್ಷದಲ್ಲಿ ಆತನನ್ನು ಪರೀಕ್ಷಿಸತಕ್ಕದ್ದು ಮತ್ತು ಆತನ:ಆಕೆಯ ದೇಹದ ಮೇಲೆ ದೊಡ್ಡ ಮತ್ತು ಸಣ್ಣ ಕ್ಷತಿಗಳು ಯಾವುದಾದರೂ ಇದ್ದರೆ, ಅವುಗಳನ್ನು ಆ ಸಮಯದಲ್ಲಿ ದಾಖಲು ಮಾಡತಕ್ಕದ್ದು. ಈ 'ಪರೀಕ್ಷಾ ಜ್ಞಾಪನ'ಕ್ಕೆ ದಸ್ತಗಿರಿಯಾದ ವ್ಯಕ್ತಿ ಮತ್ತು ದಸ್ತಗಿರಿ ಮಾಡುವ ಪೋಲೀಸ್ ಅಧಿಕಾರಿ ಇಬ್ಬರೂ ಸಹಿ ಹಾಕತಕ್ಕದ್ದು ಮತ್ತು ಅದರ ಪ್ರತಿಯನ್ನು ದಸ್ತಗಿರಿಯಾದ ವ್ಯಕ್ತಿಗೆ ನೀಡತಕ್ಕದ್ದು.

8) ದಸ್ತಗಿರಿಯಾದವನನ್ನು ಬಂಧನದಲ್ಲಿರಿಸುವ ಅವಧಿಯಲ್ಲಿ, ಸಂಬಂಧಪಟ್ಟ ರಾಜ್ಯದ ಕೇಂದ್ರಾಡಳಿತ ಪ್ರದೇಶದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನಿರ್ದೇಶಕರಿಂದ ನೇಮಕವಾದ ಅನುಮೋದಿತ ವೈದ್ಯರುಗಳ ಪಟ್ಟಿಯಲ್ಲಿರುವ ಒಬ್ಬ ವೈದ್ಯನಿಂದ ಪ್ರತಿ 48 ಗಂಟೆಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸತಕ್ಕದ್ದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನಿರ್ದೇಶಕರು ಎಲ್ಲಾ ತಾಲ್ಲೂಕುಗಳಿಗೆ ಹಾಗೂ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅಂತಹ ಒಂದು ವೈದ್ಯರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

9) ಮೇಲೆ ಉಲ್ಲೇಖಿಸಿದ ದಸ್ತಗಿರಿಯ ಜ್ಞಾಪನವೂ ಸೇರಿದಂತೆ ಎಲ್ಲಾ ದಸ್ತಾವೇಜುಗಳ ಪ್ರತಿಗಳನ್ನು ಇಲ್ಲದ ಮ್ಯಾಜಿಸ್ಟ್ರೇಟ್ ಅವರಿಗೆ ಅವರ ದಾಖಲೆಗಾಗಿ ಕಳುಹಿಸಿಕೊಡತಕ್ಕದ್ದು.

10) ದಸ್ತಗಿರಿಯಾದವನನ್ನು ಪ್ರಶ್ನಿಸುವ ಸಮಯದುದ್ದಕ್ಕೆ ಅಲ್ಲದಿದ್ದರೂ ಆ ವ್ಯಕ್ತಿಯನ್ನು ಪ್ರಶ್ನಿಸುವ ಸಮಯದಲ್ಲಿ ಅವನು ತನ್ನ ವಕೀಲರನ್ನು ಭೇಟಿ ಮಾಡಲು ಅನುಮತಿಸತಕ್ಕದ್ದು.

.... 3)

11) ಎಲ್ಲಾ ಜಿಲ್ಲೆಗಳಲ್ಲಿ ಮತ್ತು ರಾಜ್ಯ ಕೇಂದ್ರಸ್ಥಾನಗಳಲ್ಲಿ ಒಂದು ಪೊಲೀಸ್ ಕಂಟ್ರೋಲ್ ರೂಂ ನ್ನು ಒದಗಿಸತಕ್ಕದ್ದು, ಈ ಕೇಂದ್ರಕ್ಕೆ ದಸ್ತಗಿರಿ ಮತ್ತು ದಸ್ತಗಿರಿಯಾದವನನ್ನು ಕಸ್ಟಡಿಯಲ್ಲಿ ಇಟ್ಟಿರುವ ಸ್ಥಳ ಕುರಿತ ಮಾಹಿತಿಯನ್ನು ದಸ್ತಗಿರಿ ಮಾಡಿದ ಅಧಿಕಾರಿಯು ದಸ್ತಗಿರಿ ಮಾಡಿದ 12 ಗಂಟೆಯೊಳಗಾಗಿ ತಿಳಿಸತಕ್ಕದ್ದು ಮತ್ತು ಪೊಲೀಸ್ ಕಂಟ್ರೋಲ್ ರೂಂ ನಲ್ಲಿ ಈ ಮಾಹಿತಿಯನ್ನು ಎದ್ದು ಕಾಣುವಂಥ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.

ಮೇಲೆ ತಿಳಿಸಿರುವ ಅಗತ್ಯತೆಗಳನ್ನು ಪಾಲಿಸಲು ತಪ್ಪಿದರೆ, ಸಂಬಂಧಪಟ್ಟ ಅಧಿಕಾರಿಯನ್ನು ಇಲಾಖಾ ಕ್ರಮಗಳಿಗೆ ಒಳಪಡಿಸುವುದೇ ಅಲ್ಲದೇ, ನ್ಯಾಯಾಲಯ ನಿಂದನೆಗಾಗಿ ಶಿಕ್ಷಿಸಲು ಬದ್ಧನನ್ನಾಗಿಸಲಾಗುತ್ತದೆ ಮತ್ತು ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಈ ವಿಷಯದಲ್ಲಿ ಪ್ರಾದೇಶಿಕ ಅಧಿಕಾರ ವ್ಯಾಪ್ತಿ ಹೊಂದಿರುವ ದೇಶದ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಮಾಡಬಹುದು.

ಮೇಲೆ ಉಲ್ಲೇಖಿಸಲಾಗಿರುವ ಅಗತ್ಯತೆಗಳನ್ನು ಸಂವಿಧಾನದ ಅನುಚ್ಛೇದ 21 ಮತ್ತು 22(1) ರಿಂದ ತೆಗೆದುಕೊಳ್ಳಲಾಗಿದೆ. ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯವಶ್ಯ. ಇವು ಈಗಾಗಲೇ ಉಲ್ಲೇಖಿಸಲಾಗಿರುವ ಇನ್ನಿತರ ಸರ್ಕಾರಿ ಏಜೆನ್ಸಿಗಳಿಗೂ ಕೂಡ ಅಷ್ಟೇ ಪರಿಣಾಮದೊಂದಿಗೆ ಅನ್ವಯವಾಗುತ್ತದೆ.

ಈ ಅಗತ್ಯತೆಗಳು ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ಸುರಕ್ಷೆಗಳಿಗೆ ಹೆಚ್ಚಿಗೆಯಾಗಿ ನಿಗದಿಪಡಿಸಿದವುಗಳಾಗಿವೆ. ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳು ಮತ್ತು ಘನತೆಯನ್ನು ರಕ್ಷಿಸುವುದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಗಳು ಕಾಲಕಾಲಕ್ಕೆ ನೀಡಿರುವ ವಿವಿಧ ಇತರ ನಿರ್ದೇಶನಗಳಿಗಿಂತ ಭಿನ್ನವಾದವುಗಳಾಗಿಲ್ಲ.

ಮೇಲೆ ಹೇಳಲಾಗಿರುವ ಅಗತ್ಯತೆಗಳನ್ನು ಪ್ರತಿಯೊಂದು ರಾಜ್ಯದ, ಕೇಂದ್ರಾಡಳಿತ ಪ್ರದೇಶದ ಪೊಲೀಸ್ ಮಹಾ ನಿರ್ದೇಶಕರಿಗೆ ಮತ್ತು ಗೃಹ ಇಲಾಖಾ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕದ್ದು. ಮತ್ತು ಅದನ್ನು ತಮ್ಮ ಪ್ರಭಾರದಲ್ಲಿರುವ ಪ್ರತಿಯೊಂದು ಪೊಲೀಸ್ ಠಾಣೆಗೂ ಸುತ್ತೋಲೆ ಮೂಲಕ ತಿಳಿಸುವುದು ಮತ್ತು ಪ್ರತಿಯೊಂದು ಪೊಲೀಸ್ ಠಾಣೆಯಲ್ಲೂ ಎದ್ದು ಕಾಣುವ ಸ್ಥಳದಲ್ಲಿ ಅದನ್ನು ಪ್ರದರ್ಶಿಸುವಂತೆ ಮಾಡುವುದು ಅವರ ಹೊಣೆಗಾಗಿರತಕ್ಕದ್ದು. ಅಷ್ಟೇ ಅಲ್ಲದೆ, ಈ ಅಗತ್ಯತೆಗಳನ್ನು ದೂರದರ್ಶನದ ರಾಷ್ಟ್ರೀಯ ಜಾಲದಲ್ಲಿ ಪ್ರದರ್ಶಿಸುವುದರ ಜೊತೆಗೆ ಆಕಾಶವಾಣಿಯಲ್ಲೂ ಪ್ರಸಾರ ಮಾಡುವುದರಿಂದ ಮತ್ತು ಜನಸಾಮಾನ್ಯರ ಮಾಹಿತಿಗಾಗಿ ಈ ಅಗತ್ಯತೆಗಳನ್ನು ಒಳಗೊಂಡ ಕರಪತ್ರಗಳನ್ನು ಸ್ಥಳೀಯ ಭಾಷೆಯಲ್ಲಿ ಪ್ರಕಟಿಸಿ, ಹಂಚುವುದರಿಂದ ಉಪಯುಕ್ತವಾ, ಹೆಚ್ಚು ಜನರಿಗೆ ತಲುಪುವಂತೆಯೂ ಆಗುತ್ತದೆ. ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು, ಕಸ್ಟಡಿಯಲ್ಲಿರುವಾಗ ಆಗುವ ಅಪರಾಧದಂತಹ ದುಷ್ಟವ್ಯವಸ್ಥೆಯ ವಿರುದ್ಧ ಹೋರಾಡುವ ಹಾಗೂ ಪಾರದರ್ಶಕತೆಯನ್ನು ತರುವ ಹೊಣೆಗಾರಿಕೆಯನ್ನುಂಟು ಮಾಡುವ ದಿಶೆಯಲ್ಲಿಡುವ ಒಂದು ಸರಿಯಾದ ಹೆಜ್ಜೆಯಾದೀತೆಂಬುದು ನಮ್ಮ ಅಭಿಪ್ರಾಯ. ಇದರಿಂದ ಅಭಿರಕ್ಷೆಯಲ್ಲಿರುವಾಗ ಅಪರಾಧ ಎಸಗುವುದಕ್ಕೆ ಕಾರಣವಾಗುವಂಥ ಪ್ರಶ್ನಿಸುವ ಹಾಗೂ ತನಿಖೆ ನಡೆಸುವ ಸಮಯದಲ್ಲಿ ಪ್ರಶ್ನಾರ್ಹವಾದ ವಿಧಾನಗಳನ್ನು ಬಳಸುವುದನ್ನು ಪೂರ್ಣವಾಗಿ ನಿವಾರಿಸಲು ಸಾಧ್ಯವಾಗದಿದ್ದರೂ ಕೆಲಮಟ್ಟಿಗಾದರೂ ಕಡಿಮೆ ಮಾಡಲು ಈ ಅಗತ್ಯತೆಗಳು ನೆರವಾಗುತ್ತವೆಂದು ಆಶಿಸಲಾಗಿದೆ..